**ಇಂದು ದಿನಾಂಕಃ 10-04-2024 ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಆರೋಪಿ ಪರವಾಗಿ ಶ್ರೀ ಬಿ.ಎಸ್. ವಕೀಲರಿಂದಃ-**

ಬಿಳಿ ಬಣ್ಣದ ಕ್ಯಾರಿಬ್ಯಾಗಿನ ಉದ್ದಳತೆ ಸುಮಾರು 1 ಮೀ. ಮತ್ತು ಅಗಲ 30 ರಿಂದ 35 ಸೆಂ.ಮೀ ಇತ್ತು. ಸದರಿ ಕ್ಯಾರಿಬ್ಯಾಗನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ಸಾಕ್ಷಿ ಮುಂದುವರೆದು ಕ್ಯಾರಿಬ್ಯಾಗಲ್ಲ ಪ್ಲಾಸ್ಟಿಕ ಚೀಲ ಎಂದು ನುಡಿಯುತ್ತಾರೆ. ಸದರಿ ಚೀಲದಲ್ಲಿ ಪೆಂಗೋಲಿನ ಹಿಡಿಸುವುದಿಲ್ಲ ಎಂದರೆ ಸಾಕ್ಷಿ ಸದರಿ ಪೆಂಗೋಲಿನ ಸುರಳಿ ಸುತ್ತಿಕೊಂಡಾಗ ಚೀಲದಲ್ಲಿ ಹಿಡಿಯುತ್ತದೆ ಎಂದು ನುಡಿಯುತ್ತಾರೆ. ಪೆಂಗೋಲಿನ ಪ್ರಾಣಿಯಿಂದ ಮನುಷ್ಯನಿಗೆ ಯಾವುದೇ ಅಪಾಯಕಾರಿ ಇಲ್ಲ ಎಂದರೆ ಸರಿ. ಸಾಮಾನ್ಯವಾಗಿ ಪೆಂಗೋಲಿನ ಪ್ರಾಣಿ ನೇಲದ ಒಳಗೆ ಇರುತ್ತದೆ ಎಂದರೆ ಸರಿ.

ನನ್ನ ಮುಖ್ಯ ವಿಚಾರಣೆಯಲ್ಲಿ ಆರೋಪಿ ಯಾವ ಸ.ನಂ.ದಲ್ಲಿ ಪೆಂಗೋಲಿನ ಪ್ರಾಣಿಯನ್ನು ಹಿಡಿದನು ಎಂದು ಉಲ್ಲೇಖವಿಲ್ಲ ಎಂದರೆ ಸರಿ. ಆರೋಪಿ ಕುಂಚಾವರಂ ಗ್ರಾಮದವನು ಎಂದರೆ ಸರಿ. ಚಾಸಾ-3 ರವರು ಬೋನಸಪುರ ಗ್ರಾಮದವರು ಎಂದರೆ ಸರಿ. ಕುಂಚಾವರಂ ಗ್ರಾಮದಿಂದ ಬೋನಸಪುರ ಗ್ರಾಮ ಅಂದಾಜು 5 ಕಿ.ಮೀ ದೂರದಲ್ಲಿದೆ. ಕುಂಚಾವರಂ ಗ್ರಾಮ ಅಂದಾಜು 7000-8000 ಜನ ಸಂಖ್ಯೆ ಇದೆ ಎಂದರೆ ಇರಬಹುದು. ನಮ್ಮ ಕಛೇರಿಯ ದಕ್ಷಿಣ ಭಾಗಕ್ಕೆ ಕುಂಚಾವರಂ ಪೋಲಿಸ ಠಾಣೆ ಇದೆ ಎಂದರೆ ಸಾಕ್ಷಿ ನಮ್ಮ ಕಛೇರಿಯ ಕಂಪೋಡಿಗೆ ಹತ್ತಿಕೊಂಡು ಇದೆ ಎಂದು ನುಡಿಯುತ್ತಾರೆ. ನಮ್ಮ ಕಛೇರಿಯ ಪೂರ್ವ ದಿಕ್ಕಿಗೆ ಕುಂಚಾವರಂ ಮುಖ್ಯ ರಸ್ತೆ ಇದೆ ಎಂದರೆ ಸರಿ. ಸಾಮಾನ್ಯವಾಗಿ ಕುಂಚವರಂದಲ್ಲಿ ಪ್ರತಿ ರವಿವಾರ ಮಾರುಕಟ್ಟೆ ಇದ್ದು ಅಲ್ಲಿ ಕನಿಷ್ಟ 2 ರಿಂದ 3 ಸಾವಿರ ಜನ ಸೇರುತ್ತಾರೆ ಎಂದರೆ ಸರಿ. ಕುಂಚಾವರಂ ಮಾರುಕಟ್ಟೆಯಲ್ಲಿ ಪ್ರತಿದಿನ 500 ಜನ ಇರುತ್ತಾರೆ ಎಂದರೆ ಸರಿ. ಸಾಮಾನ್ಯವಾಗಿ 500 ಜನರಲ್ಲಿ 300 ಜನರು ಕುಂಚಾವರಂ ಗ್ರಾಮದವರು ಇದ್ದರೇ ಉಳಿದ 200 ಜನರು ಬೇರೆ ಗ್ರಾಮದ ಜನರು ಇರುತ್ತಾರೆ ಎಂದರೆ ಇರಬಹುದು. ಬಾತ್ಮಿ ಬಂದಾಗ ಸಾರ್ವಜನಿಕರಿಗೆ ಪಂಚನರಾಗಲು ಕೇಳಿಲ್ಲ ಮತ್ತು ಅದರ ಬಗ್ಗೆ ಪಂಚನಾಮೆಯಲ್ಲಿ ಉಲ್ಲೇಖ ಮಾಡಿಲ್ಲ. ಎಲ್ಲಾ ಪಂಚನಾಮೆಯಲ್ಲಿ ನಮ್ಮ ಇಲಾಖೆಯವರಿಗೆ ಪಂಚರಾಗಿ ಸೇರಿಸಿದ್ದೇವೆ ಎಂದರೆ ಸರಿ. ನಮ್ಮ ಇಲಾಖೆಯ ಎಲ್ಲಾ ಪ್ರಕರಣದಲ್ಲಿ ಯಾವುದೇ ಸ್ವಾತಂತ್ರ್ಯ ಸಾಕ್ಷಿಯನ್ನು ಪಡೆದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಸಾಮಾನ್ಯವಾಗಿ ಸಾರ್ವಜನಿಕರು ಪಂಚರಾಗಲೂ ಅಥವಾ ಸಾಕ್ಷಿದಾರರಾಗಲು

ಒಪ್ಪುವುದಿಲ್ಲ ಎಂದು ನುಡಿಯುತ್ತಾರೆ.

ಮಂಬಾಪುರ ಸ.ನಂ. 30 ರಲ್ಲಿ ಆರೋಪಿ ವಿದ್ಯುತನ್ನು ಹಾಕಿದ್ದಾನೆ. ಈ ರೀತಿ ಸರ್ವೇ ನಂಬರನ್ನು ನನ್ನ ಮುಖ್ಯ ವಿಚಾರಣೆಯಲ್ಲಿ ಉಲ್ಲೇಖವಿಲ್ಲ. ವಿದ್ಯುತ ವೈಯರನ್ನು ಜಪ್ತಿ ಮಾಡಿದ್ದಿರಾ ಎಂದು ಪ್ರಶನಿಸಿದಾಗ ಸಾಕ್ಷಿ ಸಿಕ್ಕಿರುವುದಿಲ್ಲ ಎಂದು ನುಡಿಯುತ್ತಾರೆ. ಎಷ್ಟು ಅಳತೆಯ ವೈಯರನ್ನು ಹಾಕಿರುವ ಬಗ್ಗೆ ಪಂಚನಾಮೆಯಲ್ಲಿ ಉಲ್ಲೇಖವಿಲ್ಲ ಎಂದರೆ ಸರಿ. ಆರೋಪಿ ಅರಣ್ಯ ಪ್ರದೇಶದಲ್ಲಿ ಯಾವುದೇ ವಿದ್ಯುತ ವೈಯರನ್ನು ಹಾಕಿರುವುದಿಲ್ಲ ಆದ್ದರಿಂದ ಪಂಚನಾಮೆಯಲ್ಲಿ ಅದರ ಬಗ್ಗೆ ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ.

ಅರಣ್ಯ ಪ್ರದೇಶಕ್ಕೆ ಹತ್ತಿಕೊಂಡು ನಾಕೆ ನಾರಾಯಣರವರ ಪಟ್ಟಾ ಜಮೀನು ಇದೆ ಎಂದರೆ ಇರಬಹುದು. ಸದರಿ ನಾರಾಯಣರವರಲ್ಲಿ ಆರೋಪಿ ಕೆಲಸ ಮಾಡುತ್ತಾನೆ ಎಂದರೆ ಇರಬಹುದು. ನಾಕೆ ನಾರಾಯಣರವರ ಹೇಳಿಕೆಯನ್ನು ಪಡೆದಿಲ್ಲ. ಸುಮಾರು 8 ವರ್ಷಗಳಿಂದ ಸದರಿ ನಾರಾಯಣರವರ ಹತ್ತಿರ ಕೆಲಸ ಮಾಡುತ್ತಿದ್ದಾನೆ ಎಂದರೆ ಇರಬಹುದು. ಸಾಮಾನ್ಯವಾಗಿ ಕಾಡು ಪ್ರಾಣಿಗಳು ಅರಣ್ಯ ಪ್ರದೇಶ ಬಿಟ್ಟು ಬೇರೆ ಪಟ್ಟಾ ಜಮೀನಿಗೆ ಹೋಗಬಹುದು ಎಂದರೆ ಸರಿ. ಸಾಮಾನ್ಯವಾಗಿ ಮನುಷ್ಯನ ಶಬ್ದ ಕೇಳಿದರೆ ಕಾಡು ಪ್ರಾಣಿಗಳು 1-2 ಕಿ.ಮೀ ವರೆಗೆ ಓಡಿ ಹೋಗುತ್ತವೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಯಾವುದೇ ಕಾಡು ಪ್ರಾಣಿಗಳು ಮನುಷ್ಯನಿಂದ ಭಯ ಪಟ್ಟು ಓಡಿ ಹೋಗುತ್ತವೆ ಎಂದರೆ ಸರಿ. ಪೆಂಗೋಲಿನ ಸಾಮಾನ್ಯವಾಗಿ ಮನುಷ್ಯನಿಂದ ಭಯ ಪಟ್ಟು ದೂರು ಇರುತ್ತವೆ ಎಂದರೆ ಸಾಕ್ಷಿ ಮನುಷ್ಯರು ಅದನ್ನು ಹೀಡಿಯುತ್ತಾರೆ ಎಂದು ನುಡಿಯುತ್ತಾರೆ.

ನಮ್ಮ ತಂಡವನ್ನು ನೋಡಿ ಪೆಂಗೋಲಿನ ಪ್ರಾಣಿ ಓಡಿ ಹೋಗಬಹುದಿತ್ತು ಎಂದು ಪ್ರಶ್ನಿಸಿದಾಗ ಸಾಕ್ಷಿ ಅದು ಚೀಲದಲ್ಲಿ ಸುತ್ತಿಕೊಂಡು ಇತ್ತು ಎಂದು ನುಡಿಯುತ್ತಾರೆ. ಅಂತಹ ಚೀಲ ಇಲ್ಲ ಮತ್ತು ಚೀಲವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದರೆ ಸತ್ಯಾಂಶ ಹೊರಗೆ ಬರುತ್ತದೆ ಎಂದು ಚೀಲವನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ.

ಪೆಂಗೋಲಿನ ಪ್ರಾಣಿಗೂ ಮತ್ತು ಆರೋಪಿಗೂ ಯಾವುದೇ ಸಂಬಂಧವಿಲ್ಲ ಮತ್ತು ಆರೋಪಿ ನಾಕೆ ನಾರಾಯಣರವರಲ್ಲಿ ಕೆಲಸ ಮಾಡಿ ಬರುವಾಗ ಅವನನ್ನು ಹೀಡಿದು ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಸ್ವಾತಂತ್ರ ವ್ಯಕ್ತಿಯನ್ನು ಸಾಕ್ಷಿದಾರರಾಗಿ ಸೇರಿಸಿದರೆ ನಮ್ಮ ಇಲಾಖೆಯವರನ್ನು ಸಾಕ್ಷಿದಾರರಾಗಿ ಸೇರಿಸಿ ಸುಳ್ಳು ಹೇಳಿಕೆಯನ್ನು ಪಡೆದು ಸುಳ್ಳು ಸಾಕ್ಷಿ

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಕಛೇರಿಯಲ್ಲಿ ಕುಳಿತು ಪಂಚನಾಮೆಯನ್ನು ಸೃಷ್ಟಿಸಿ ತನಿಖೆ ಮಾಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಹಾಗೂ ಪ್ರಾಣಿಗೂ, ವಿದ್ಯುತ ವೈಯರಿಗೂ ಹಾಗೂ ಕೋಲಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಸುಳ್ಳು ದೂರು ಸಲ್ಲಿಸಿ ಈ ದಿನ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**